ಗೋಕಾಕ್ ತಾಲ್ಲೂಕಿನ ಘಟಪ್ರಭಾ ಮತ್ತು ಗೋಕಾಕ್ ನಗರದ ವಿದ್ಯುತ್ ವಿತರಣಾ ಕೇಂದ್ರದ ಕೆಲಸ.

1232 - ಶ್ರೀ ಚಂದ್ರಶೇಖರ್ ನಾಯಕ್ (ಗೋಕಾಕ್) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೋಕಾಕ್ ತಾಲ್ಲೂಕಿನ ಘಟಪ್ರಭಾದಲ್ಲಿ ಮಂಜೂರಾಗಿದ್ದ 220 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರದ ಕೆಲಸ ಯಾವ ಹಂತದಲ್ಲಿದೆ?

ಆ) ಸದರಿ ಕೆಲಸವನ್ನು ಪೂರೈಸಲು ಬೇಕಾಗುವ ಅಂದಾಜು ವೆಚ್ಚ ಎಷ್ಟು?

ಇ) ಸದರಿ ಕೆಲಸವನ್ನು ಎಷ್ಟು ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು?

ಈ) ಗೋಕಾಕ್ ನಗರದಲ್ಲಿ ಸ್ಥಾಪಿಸಬೇಕಾದ 110 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರದ ಕೆಲಸವನ್ನು ಯಾವಾಗ ಪ್ರಾರಂಭಿಸಲಾಗುವುದು?

ಉ) ಸದರಿ ಕಾಮಗಾರಿಗೆ ತಗಲುವ ವೆಚ್ಚ ಎಷ್ಟು?

ಊ) ಸದರಿ ಯೋಜನೆಯನ್ನು ಎಷ್ಟು ದಿವಸದಲ್ಲಿ ಪೂರ್ಣಗೊಳಿಸಲಾಗುವುದು?

ಶ್ರೀ ಶರಣ ಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ಗೋಕಾಕ್ ತಾಲ್ಲೂಕಿನ ಘಟಪ್ರಭಾದಲ್ಲಿ 220 ಕೆವಿ ವಿದ್ಯುತ್ ವಿತರಣಾ ಕೇಂದ್ರ ಮಂಜೂರಾಗಿಲ್ಲ.

ಆ) ಸಾಮಾನ್ಯವಾಗಿ ಒಂದು 220 ಕೆ.ವಿ. ವಿದ್ಯುತ್ ವಿತರಣಾಕೇಂದ್ರದ ನಿರ್ಮಾಣಕ್ಕೆ ತಗಲುವ ಅಂದಾಜು ವೆಚ್ಚ ಸುಮಾರು 40 ಕೋಟಿ ರೂಪಾಯಿಗಳು.

ಇ) ಪ್ರಶ್ನೆಯ 'ಅ' ಭಾಗಕ್ಕೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಈ) ಗೋಕಾಕ್ ನಗರದಲ್ಲಿ ಹಾಲಿಯಿರುವ 33 ಕೆ.ವಿ. ಉಪ ಕೇಂದ್ರವನ್ನು 110 ಕೆ.ವಿ. ಉಪಕೇಂದ್ರಕ್ಕೆ ಉನ್ನತೀಕರಣಗೊಳಿಸಲು ಮಂಡಳಿಯ ತಾಂತ್ರಿಕ ಸಮಿತಿಯ ಫೆಬ್ರವರಿ 98ರಲ್ಲಿ ಅನುಮೋದನೆ ನೀಡಿದೆ. ಮಂಡಳಿಯಿಂದ ಆಡಳಿತಾತ್ಮಕ ಮಂಜೂರಾತಿ ದೊರೆತ ನಂತರ ಕೆಲಸವನ್ನು ಪ್ರಾರಂಭಿಸಲು ಸಾಧ್ಯವಾಗುತ್ತದೆ.

ಉ) ಸದರಿ ಕಾಮಗಾರಿಗೆ ತಗಲುವ ಅಂದಾಜು ವೆಚ್ಚ ಸುಮಾರು 550 ಲಕ್ಷ ರೂ.ಗಳು.

ಊ) ಈ ಕಾಮಗಾರಿಯನ್ನು ಆಡಳಿತಾತ್ಮಕ ಮಂಜೂರಾತಿ ದೊರೆತ ನಂತರ ಪ್ರಾರಂಭಿಸಬೇಕಾಗಿರುವುದರಿಂದ ಕಾಮಗಾರಿಯ ನಿರ್ವಹಣೆಗೆ ಗುರಿಯನ್ನು ಇನ್ನೂ ನಿಗಧಿ ಪಡಿಸಿರುವುದಿಲ್ಲ.